**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ರಾಣೇಬೆನ್ನೂರು.**

**ಸಿಸಿ ನಂಬರಃ 1890/2023**

ಸಿ ಡಬ್ಲ್ಯೂ –13

ಪಿ ಡಬ್ಲ್ಯೂ–14

| | | |
|---|---|---|
| **ಸಾಕ್ಷಿದಾರರ ಹೆಸರು** | : | ವೆಂಕಣ್ಣ |
| **ತಂದೆ/ಗಂಡನ ಹೆಸರು** | : | ಹಾಲಪ್ಪ ಕೊಪ್ಪದ |
| **ವಯಸ್ಸು** | : | 50 ವರ್ಷ |
| **ಉದ್ಯೊಗ** | : | ಹೆಚ್ ಸಿ –1251 ರಾಣೇಬೆನ್ನೂರು ಸಂಚಾರಿ ಪೋಲಿಸ್ ಠಾಣೆ |
| **ವಾಸ** | : | ರಾಣೇಬೆನ್ನೂರು |

**ದಿನಾಂಕಃ 21–05–2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

ನಾನು ಆಗಷ್ಟ 2018 ರಿಂದ ಮಾರ್ಚ 2022 ವರೆಗೆ ಹಲಗೇರಿ ಪೋಲಿಸ್ ಠಾಣೆಯಲ್ಲಿ ಪಿಸಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 27.06.2022 ರಂದು ರಾತ್ರಿ ಪಿ ಎಸ್ ಐ ಸಂಗಡ ಗಸ್ತಿಗೆ ಹೋದಾಗ ದಿನಾಂಕ 28.06.2022 ರಂದು ಬೆಳಿಗ್ಗೆ 04.45 ಗಂಟೆಯ ಸಮಯದಲ್ಲಿ ಹಲಗೇರಿ ಬಸ್ಟಾಂಡ್ ಹತ್ತಿರ ಗೂಡ್ಸ ಅಪೇ ಗಾಡಿ ಬರುವುದನ್ನು ನೋಡಿ ನಾವು ಸಂಶಯದಿಂದ ನಿಲ್ಲಿಸಿದ್ದು ಹಾಗೂ ಅವರ ಸಂಗಡ ಒಂದು ಬೈಕು ಸವಾರಿನಿದ್ದು ನಾವು ಹತ್ತಿರ ಹೋಗಿ ನೋಡಿದಾಗ ಗೂಡ್ಸ ಗಾಡಿಯಲ್ಲಿ ಕಬ್ಬಿಣದ ರಾಡುಗಳು ಇದ್ದವು. ನಾನು ಮತ್ತು ಪಿ ಎಸ್ ಐ ರವರು ಸದರಿ ವಾಹನವನ್ನು ಪರಿಶೀಲಿಸಲಾಗಿ ಆ ಗಾಡಿಯಲ್ಲಿದ್ದ ಚಾಲಕ ಸೇರಿ ಮೂರು ಜನರು ಇದ್ದು ಅವರು ಒಡಿ ಹೋಗಲು ಪ್ರಯತ್ನ ಪಟ್ಟರು. ನಾವು ಅವರನ್ನು ಹಿಡಿದುಕೊಂಡಿದ್ದು ಪಿ ಎಸ್ ಐ ರವರು ವಿಚಾರಿಸಿದಾಗ ಕಬ್ಬಿಣದ ರಾಡು ಮತ್ತು ಒಂದು ಅಪೆ ಗಾಡಿ ಮತ್ತು ಮೋಟಾರ್ ಸೈಕಲನ್ನು ಕಳ್ಳತನ ಮಾಡಿರುವುದಾಗಿ ಹೇಳಿದ್ದು ಅವರನ್ನು ನಮ್ಮ ವಶಕ್ಕೆ ತೆಗೆದುಕೊಂಡು ವಿಚಾರಣೆ ಮಾಡಿರುತ್ತೇವೆ. ಅಪೇ ಗಾಡಿಯನ್ನು ಶಿಕಾರಿಪುರದಲ್ಲಿ ಕಳ್ಳತನ ಮಾಡಿದ್ದು ಮೋಟಾರ್ ಸೈಕಲ್ ನ್ನು ಮಾಳನಾಯಕನಹಳ್ಳಿಯಲ್ಲಿ ಕಳ್ಳತನ ಮಾಡಿದ್ದು

ಸಿ ಡಬ್ಲ್ಯೂ -13

ಪಿ ಡಬ್ಲ್ಯೂ-14

ಕಬ್ಬಿಣದ ರಾಡುಗಳನ್ನು ಗೋವಿಂದ ಬಡಾವಣೆಯಲ್ಲಿ ಕಳ್ಳತನ ಮಾಡಿರುವುದಾಗಿ ಹೇಳಿರುತ್ತಾರೆ. ಆಗ ಪಿ ಎಸ್ ಐ ರವರು ಪಿಸಿ -1086 ರವರಿಗೆ ಪಂಚರನ್ನು ಕರೆ ತರುವಂತೆ ಹೇಳಿದ್ದು ನಂತರ ಪಂಚರನ್ನು ಕರೆತಂದ ನಂತರ ಅವರು ಚಾಸಾ-8 ಮತ್ತು 9 ರವರನ್ನು ಕರೆ ತಂದ ನಂತರ ಅವರ ಸಮಕ್ಷಮ ಕಳ್ಳತನವಾದ ವಾಹನಗಳು ಹಾಗೂ ಕಬ್ಬಿಣದ ಸರಳುಗಳನ್ನು ಜಪ್ತಿ ಪಂಚನಾಮೆ ಮಾಡಿರುತಾರೆ. ಸದರಿ ಮೂರುಜನರ ಆರೋಪಿತರ ಹೆಸರನ್ನು ಕೇಳಲಾಗಿ 1) ಪ್ರಸನ್ನ , 2) ಗಿರೀಶ , 3) ಮಣಿಕಂಠ ಎಂದು ಹೇಳಿರುತ್ತಾರೆ. ನಂತರ ಮದ್ಯಾಹ್ನ 02.45 ಗಂಟೆಯಿಂದ ಠಾಣೆಯಿಂದ ಹೊರಟು 03 ರಿಂದ 03.30 ರವರೆಗೆ ಗೋವಿಂದ ಬಡಾವಣೆಯಲ್ಲಿ ಕಳ್ಳತನವಾದ ಸ್ಥಳದ ಪಂಚನಾಮೆಯನ್ನು ಪಿ ಎಸ್ ಐ ರವರು ನನ್ನ ಹಾಗೂ ಪಂಚರಾದ ಚಾಸಾ-8 ಮತ್ತು 9 ರವರ ಸಮಕ್ಷಮ ಮಾಡಿರುತ್ತಾರೆ. ಆ ಕಾಲಕ್ಕೆ ಪೋಟೋ ತೆಗೆದಿರುತ್ತಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನಾನು ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಮ್ ಹೆಚ್ ಜಿ ವಕೀಲರಿಂದಃ</u>**

ದಿನಾಂಕ 27.06.2022 ರಂದು ರಾತ್ರಿ 10.00 ಗಂಟೆಯಿಂದ ಗಸ್ತು ಕರ್ತವ್ಯವನ್ನು ಆರಂಬಿಸಿರುತ್ತೇವೆ. ಅಪೆ ಗಾಡಿ ಮತ್ತು ಮೋಟಾರ್ ಸೈಕಲ್ ವಾಹನ ಹಾಗೂ ಕಬ್ಬಿಣದ ರಾಡುಗಳು ಕಳ್ಳತನ ಆದ ಬಗ್ಗೆ ಯಾರೂ ಪಿರ್ಯಾದಿ ಕೊಟ್ಟಿರಲಿಲ್ಲ. ಆರೋಪಿತರು ನಮ್ಮನ್ನು ನೋಡಿ ಒಡಲು ಪ್ರಯತ್ನ ಪಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಆ ದಿನದಂದು ಹಲಗೇರಿ ಬಸ್ಟಾಂಡ ಹತ್ತಿರ ಹೋಗಿಲ್ಲ ಆರೋಪಿಗಳನ್ನು ನೋಡಿಲ್ಲ ಮತ್ತು ಅವರನ್ನು ತಡೆದು ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳನ್ನು ವಿಚಾರಣೆ ಮಾಡಲಾಗಿ ಅವರು ಅಪೆ ಗಾಡಿ ಮತ್ತು ಮೋಟಾರ್ ಸೈಕಲ್ ವಾಹನ ಹಾಗೂ ಕಬ್ಬಿಣದ ರಾಡುಗಳನ್ನು ಕಳ್ಳತನ ಮಾಡಿದ್ದಾರೆ ಎಂದು ಒಪ್ಪಿಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೊಪಿತರನ್ನು ಹಿಡಿದ ಸಮಯದಲ್ಲಿ ಪಂಚನಾಮೆಯನ್ನು ಮಾಡಿದ್ದೀರಾ ಎಂದರೆ ಪಿ ಎಸ್ ಐ ರವರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಹಾಗೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಪಂಚರ ಸಮಕ್ಷಮ

ಸಿ ಡಬ್ಲ್ಯೂ -13

ಪಿ ಡಬ್ಲ್ಯೂ-14

ಪಂಚನಾಮೆಯನ್ನು ಆರೋಪಿತರು ತೋರಿಸಿದ ಸ್ಥಳದಲ್ಲಿ ಮಾಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.